# ಭಾವನೆಗಳನ್ನು ಪ್ರಚೋದಿಸಿದ ರೀತಾ ಸಾಂಗತ್ಯ

ಸುಗಂಧಾ–ರೀತಾ ಮಾತಾಡುತ್ತಾ, ಸುಗಂಧಾ ಕೇಳುತ್ತಾಳೆ, 'ಮದುವೆಯ ಬಳಿಕ ನೀನು ವಿದ್ಯಾಭ್ಯಾಸ ನಿಲ್ಲಿಸ್ತಿಯಾ' ಅಂತ.

'ಮತ್ತೇನು ಮಾಡ್ಲಿ? ಇನ್ನು ನಾನು ಓದುವ ಅಗತ್ಯವಿಲ್ಲವೆಂದು 'ಅವರು' ಹೇಳುತ್ತಿದ್ದಾರೆ.' ರೀತಾ ಮುಗುಳ್ನಕ್ಕು ಹೇಳಿದ್ದಳು. 'ಅವರು' ಎಂದರೆ ರೀತಾಳ ಭಾವೀ ಪತಿ.

'ಏಕೆ ಅಗತ್ಯವಿಲ್ಲ? ಕಡೇಪಕ್ಷ ಬಿ.ಎ. ಮಾಡಿಕೋ' ಎಂದಿದ್ದೆ.

'ಅರೇ ಬುದ್ದು! ಅವರ ಬಿಸಿನೆಸ್ ಚೆನ್ನಾಗಿದೆ. ಅವರದು ವ್ಯಾಪಾರಸ್ಥರ ವಂಶ. ಅವರಿಗೆ ಹಣದ ಕೊರತೆಯಿಲ್ಲ. ಹೀಗಾಗಿ ನಾನು ನೌಕರಿ ಮಾಡಬೇಕಿಲ್ಲ. ನೀನೇ ಹೇಳು, ನಾನು ಬಿ.ಎ. ಡಿಗ್ರಿ ತಗೊಂಡು ಏನು ಮಾಡಲಿ?' ರೀತಾ ನನ್ನನ್ನೇ ಕೇಳಿದ್ದಳು.

'ನೀನು ಹೊರಟು ಹೋಗ್ತೀಯ', ನನಗೆ ದುಃಖವಾಗಿತ್ತು. ರೀತಾ ನನ್ನ ಆತ್ಮೀಯ ಗೆಳತಿಯಾಗಿದ್ದಳು.

'ಹೋಗ್ಲೇ ಬೇಕಾಗುತ್ತೆ'

'ಅಮ್ಮನನ್ನು ಬಿಟ್ಟು?'

'ಎಲ್ಲಾ ಹುಡುಗಿಯರೂ ಹೋಗ್ತಾರೆ. ನೀನು ಸಹ ಒಂದು ದಿನ ಹೋಗ್ತೀಯ'.

'ನಾನು ಹೋಗಲ್ಲ'

'ನೋಡ್ತೀನಿ'

'ನೋಡು ಬೇಕಾದ್ರೆ'

ರೀತಾ ಹೊರಟು ಹೋದ ನಂತರ ನಾನು ಅನೇಕ ದಿನಗಳವರೆಗೆ ದುಃಖಿಯಾಗಿದ್ದೆ. ಆದರೆ ರೀತಾ ಖುಷಿಯಲ್ಲಿದ್ದಳು. ಅವಳ ಹಾವಭಾವದಲ್ಲಿ ತೀವ್ರವಾಗಿ ಪರಿವರ್ತನೆ ಬರುತ್ತಿತ್ತು, ಅದನ್ನು ನೋಡಿ ನನಗೆ ಆಶ್ಚರ್ಯವಾಗುತ್ತಿತ್ತು. ಅವಳು ಕಾಲೇಜಿಗೂ ಬರುತ್ತಿದ್ದಳು.

'ಅವರು ಹೇಳಿದರೆ ಪರೀಕ್ಷೆ ಬರೀತೀನಿ' ರೀತಾ ಸಾಧ್ಯತೆಗಳನ್ನು ಹೇಳಿದ್ದಳು.

'ಓದದೆ?'

'ಹೌದಮ್ಮ! ಓದುವುದಕ್ಕಂತೂ ಆಗಲ್ಲ, ಪರೀಕ್ಷೆಗೆ ಕೂರಲ್ಲ, ಹೋಗಲ್ಲ ಅಂತ ಹೇಳ್ತೀನಿ. ಇದು ಫೇಲ್ ಆಗುವುದಕ್ಕಿಂತ ಉತ್ತಮ'. ಈಗ ರೀತಾ ಯಾವುದೇ ವಿಷಯವನ್ನು ಗಂಭೀರವಾಗಿ ತೆಗೆದುಕೊಳ್ಳುತ್ತಿರಲಿಲ್ಲ. ಈಚೆಗೆ ನನ್ನ ಮನಸ್ಸು ಸಹ ಅವಳ ಮನೆಯ ಬಗ್ಗೆ ಆಸಕ್ತಿಯನ್ನು ಕಳೆದುಕೊಂಡಿತ್ತು. ಆದರೆ ಅವಳು, ನಾನು ಅವಳ ಮನೆಗೆ ಬಂದು ಅವಳ ಮಾತುಗಳನ್ನು ಕೇಳಬೇಕು, ಅವಳು ಮದುವೆಗೆ ಕೊಂಡ ಸೀರೆಗಳ ಬಗ್ಗೆ ನನ್ನ ಅಭಿಪ್ರಾಯವನ್ನು ಹೇಳಬೇಕೆಂದು ವಿವಶಗೊಳಿಸುತ್ತಿದ್ದಳು. ಸೀರೆಗಳನ್ನು ಅವಳೇ ಇಷ್ಟಪಟ್ಟು ಕೊಂಡಿದ್ದಳು, ನಾನದಕ್ಕೆ ಹೋಗಿರಲಿಲ್ಲ. ಅದೊಂದು ದಿನ ರೀತಾ ಒಂದು ಅನಿರೀಕ್ಷಿತ ಕೆಲಸವನ್ನು ಮಾಡಿದಳು. ನಾವಿಬ್ಬರು ಮೇಲಂತಸ್ತಿನ ಕೋಣೆಯಲ್ಲಿ ಕೂತಿದ್ದೆವು. ಅಲ್ಲಿ ನಾವು ಸಾಮಾನ್ಯವಾಗಿ ಅಧ್ಯಯನ ಮಾಡುತ್ತಿದ್ದೆವು. ನಾನು ನೋಟ್ಸ್‌ಗಳನ್ನು ಮಾಡುತ್ತಿದ್ದೆ, ರೀತಾ ಅದರ ಕಾಪಿ ಮಾಡುತ್ತಿದ್ದಳು. ಅಧ್ಯಯನದ ಬಗ್ಗೆ ನನ್ನ ಮತ್ತು ಅವಳ ನಡುವೆ ಲೇಶಮಾತ್ರವೂ ಹೊಂದಾಣಿಕೆ ಇರಲಿಲ್ಲ. ಆದರೆ ಅವಳು ನಗುಮುಖದ, ಮೋಜುಮಸ್ತಿಯ ಮತ್ತು ಧೈರ್ಯವಂತ ಹೆಣ್ಣಾಗಿದ್ದಳು. ಅವಳ 'ಸ್ಪೋರ್ಟ್ ಸ್ಪಿರಿಟ್' ನನಗೆ ಇಷ್ಟವಾಗಿತ್ತು. ನಾವಿಬ್ಬರು ಕೂಡಿ ತರಗತಿಯಲ್ಲೂ ತುಂಟತನಗಳನ್ನು ಮಾಡುತ್ತಿದ್ದೆವು, ಇದರಲ್ಲೂ ನಾವು ಮುಂದಿರುತ್ತಿದ್ದೆವು. ನನಗೆ ತರಗತಿಯಲ್ಲಿ ಸದಾ ಮುಂದಿನ ಸಾಲಿನಲ್ಲಿ ಕೂರುವುದು ಇಷ್ಟವಾಗಿತ್ತು. ರೀತಾ ಸಹ ನನಗೆ ಜೊತೆಯಾಗಲು ಮುಂದಿನ ಸಾಲಿನಲ್ಲಿ ಕೂರಲು ಆರಂಭಿಸಿದ್ದಳು. ನಮ್ಮಿಬ್ಬರಲ್ಲಿ 'ಒಂದೇತನ' ಇರಲಿಲ್ಲ. ಬಹುಶಃ ನಾವಿಬ್ಬರು ಉತ್ತಮ ಗೆಳತಿಯರಾಗಿದ್ದೆವು. ಆದರೆ ಅವಳ ವಿವಾಹ ನಿಶ್ಚಿತವಾದಂದಿನಿಂದ ನಮ್ಮ ನಡುವೆ ಭಿನ್ನತೆ ಆಕಾರ ಪಡೆಯಲಾರಂಭಿಸಿತ್ತು.

'ನಡಿ, ನಾನೊಂದು ಪುಸ್ತಕವನ್ನು ನಿನಗೆ ತೋರಿಸ್ತೀನಿ! ಬೇರೆಯವರಿಗೆ ಇದರ ಬಗ್ಗೆ ಹೇಳ್ಬೇಡ', ಹೀಗೆಂದು ರೀತಾ ತನ್ನ ಪುಸ್ತಕಗಳ ನಡುವೆಯಿದ್ದ ಒಂದು ತೆಳು ಗಾತ್ರದ, ಚಿಕ್ಕ ಪುಸ್ತಕವನ್ನು ಹೊರತೆಗೆದು ನನ್ನ ಕೈಗೆ ಕೊಟ್ಟಳು, 'ಇದನ್ನು ನೋಡು'.

'ಏನಿದೆ ಇದರಲ್ಲಿ?' ನಾನು ಪುಸ್ತಕಗಳ ಪುಟಗಳನ್ನು ತಿರುವಿ ನೋಡುತ್ತಾ ಆಶ್ಚರ್ಯಗೊಂಡೆ. ನನ್ನೆದುರಿಗೆ ತೆರೆದುಕೊಂಡಿದ್ದ ಪುಟದಲ್ಲಿ ಓರ್ವ ಮಹಿಳೆ ಮತ್ತು ಪುರುಷ ಬೆತ್ತಲೆಯ ಸ್ಥಿತಿಯಲ್ಲಿದ್ದು ವಿಚಿತ್ರವಾಗಿ ಪರಸ್ಪರ ತಬ್ಬಿಕೊಂಡಿದ್ದರು.

'ಥತ್! ಇದೇನಿದು?' ನನ್ನ ಬಾಯಿಯಿಂದ ಅನಾಯಾಸವಾಗಿಯೇ ಈ ಶಬ್ದಗಳು ಬಂದವು.

'ಇದು ಮದುವೆಯ ನಂತರ ಮಾಡುವಂಥದ್ದು, ಹಾಗಂತ ಅನೇಕ ಜನ ಮದುವೆಗೆ ಮೊದಲೂ ಮಾಡುತ್ತಾರೆ', ರೀತಾ ತುಂಬಾ ತಿಳಿವಳಿಕಸ್ಥೆಯಂತೆ ಹೇಳಿದಳು.

'ಆದ್ರೆ ಇವರೇನು ಮಾಡ್ತಿದ್ದಾರೆ?' ನನಗೆ ಅರ್ಥವಾಗುತ್ತಿರಲಿಲ್ಲ. ನಾನು ಪುಸ್ತಕದ ಪುಟಗಳನ್ನು ತಿರುವಿದೆ. ಪ್ರತಿಯೊಂದು ಪುಟದಲ್ಲಿ ಅದೇ ರೀತಿಯ ಬೆತ್ತಲೆ ಜೋಡಿಗಳ ಚಿತ್ರಗಳಿದ್ದವು; 'ತಿಳಿಯಬೇಕಾದ ವಿಷಯಗಳು' ತಲೆಬರಹದ ಅಡಿಯಲ್ಲಿ ಒಂದು ಲೇಖನ ಸಹ ಅದರಲ್ಲಿತ್ತು.

'ಸುಗಂಧಾ, ನೀನಿದನ್ನು ಓದು! ಈಗ್ಲೇ ಓದು. ನಾನು ಚಹಾ ಮತ್ತು ಪರೋಠಾ ತರ್ತೀನಿ.'

ರೀತಾ ನನ್ನನ್ನು ಆ ಪುಸ್ತಕದೊಂದಿಗೆ ಒಂಟಿಯಾಗಿ ಬಿಟ್ಟು ಹೋದಳು. ರೀತಾ ಇದ್ದಾಗ ಯಾವ ಯಾವ ಚಿತ್ರಗಳನ್ನು 'ಥತ್' ಎಂದು ಅಸಡ್ಡೆಯಿಂದ ಹೇಳಿದ್ದೆನೋ, ಈಗ ಅವುಗಳನ್ನು ಎವೆಯಿಕ್ಕದೆ ನೋಡಲಾರಂಭಿಸಿದೆ. ನನ್ನ ಶರೀರದಲ್ಲಿ ಕಾವು ಏರುತ್ತಿದೆ ಎಂದು ಅನ್ನಿಸಿತು.

ನನಗೇನಾಗುತ್ತಿದೆ? ನಾನು ಹೆದರಿದೆ. ನಾನೀಗ ಚಿತ್ರವಿದ್ದ ಪುಟವನ್ನು ತಿರುವಿ, ಲೇಖನದ ಮೇಲೆ ಕಣ್ಣು ಹಾಯಿಸಿದೆ. 'ತಿಳಿಯಬೇಕಾದ ವಿಷಯಗಳಲ್ಲಿ' ಮೊದಲನೆಯ ಉಪಶೀರ್ಷಿಕೆ, 'ವಿವಾಹದ ಮೊದಲ ರಾತ್ರಿ' ಎಂದಿತ್ತು. ಆ ಲೇಖನದಲ್ಲಿ ಬರೆದಿದ್ದು ನನಗೆ ಅರ್ಥವಾಗಿರಲಿಲ್ಲ, ಆದರೆ 'ಮೊದಲ ರಾತ್ರಿ ರಕ್ತಸ್ರಾವವಾಗುತ್ತದೆ' ಎಂಬುದನ್ನು ಓದಿ ನನಗೆ ಖಂಡಿತ ಭಯವಾಯಿತು. ನಾನು ಆ ಪುಸ್ತಕವನ್ನು ಮುಚ್ಚಿದೆ.

ರೀತಾ ಚಹಾ ಮತ್ತು ಪರೋಠಾ ತರುವಲ್ಲಿ ಬೇಕಂತಲೇ ತಡ ಮಾಡಿದಳು. ಅವಳು ನನಗೆ ಪುಸ್ತಕವನ್ನು ಓದಲು ಸಾಕಷ್ಟು ಸಮಯವನ್ನು ಕೊಡಲು ಬಯಸುತ್ತಿದ್ದಳು.

'ಓದಿದ್ಯಾ? ಇದನ್ನು ಓದಿದ ನಂತರ, ಮದುವೆಯಾದ ನಂತರ ಏನೇನು ಆಗುತ್ತದೆ ಎಂಬುದು ತಿಳಿಯುತ್ತದೆ', ರೀತಾ ನನಗೆ ತಿಳಿಯಪಡಿಸಿದಳು.

'ನಾನು ಓದಲಿಲ್ಲ, ಓದುವ ಅವಶ್ಯಕತೆ ಸಹ ನನಗಿಲ್ಲ'.

'ಏಕೆ? ನಿನಗೆ ಹಿಡಿಸಲಿಲ್ವಾ?'

'ಇಲ್ಲ'

'ಏಕೆ?'

'ಹಿಡಿಸಲಿಲ್ಲ, ಅಷ್ಟೆ!'

'ಸರಿ, ನನಗೆ ಈ ಪುಸ್ತಕವನ್ನು ನನ್ನ ಸಂಬಂಧಿಕರೊಬ್ಬರು ಕೊಟ್ಟಿದ್ದಾರೆ.' ರೀತಾಳ ಮೂಡ್ ಹಾಳಾಗಿತ್ತು. ಅವಳು ನನಗೆ ಈ ಪುಸ್ತಕವನ್ನು ಕೊಟ್ಟು, ನನ್ನಲ್ಲಿ ಜಾಗೃತಗೊಳ್ಳುವ ಉತ್ಸಾಹವನ್ನು ನೋಡಲು ಬಯಸುತ್ತಿದ್ದಳು, ಆದರೆ ನನಗೆ ಈ ಪುಸ್ತಕವನ್ನು ನೋಡಿ ಯಾವ ಭಾವನೆಯೂ ಜಾಗೃತಗೊಳ್ಳಲಿಲ್ಲ.

'ಅಮ್ಮ ಆಫೀಸಿನಿಂದ ಇವತ್ತು ಬೇಗ ಬರ್ತಾರೆ' ಎನ್ನುತ್ತಾ ನಾನು ಚಹಾ ಬೇಗಬೇಗನೆ ಕುಡಿದೆ. ನಾನು ಆ ಪುಸ್ತಕವನ್ನು ನೋಡಲು ಬಯಸುತ್ತಿರಲಿಲ್ಲ, ರೀತಾಳ ಮಾತನ್ನು ಸಹ ಕೇಳಲು ಬಯಸುತ್ತಿರಲಿಲ್ಲ. ನನಗೆ ಇವೆಲ್ಲವೂ ವಿಚಿತ್ರವಾಗಿ ತೋರುತ್ತಿದ್ದವು. ರೀತಾಳ ಈ ರೂಪ ನನಗೆ ಹೊಸದಾಗಿತ್ತು.

'ಓ.ಕೆ. ಇದನ್ನು ನೀನು ತಗೊಂಡ್ ಹೋಗು. ಓದಿ ವಾಪಸ್ ಕೊಡು' ಹೀಗೆಂದು ರೀತಾ ಆ ಪುಸ್ತಕವನ್ನು ನನ್ನ ನೋಟ್‌ಬುಕ್‌ನೊಳಗೆ ತುರುಕಿದಳು.

ನನ್ನ ಮನಸ್ಸಿನ ಕಳ್ಳ ಜಾಗೃತನಾದ. ನಾನು ಅಲ್ಲಗಳೆಯದಾದೆ. ನಿಜ ಹೇಳಬೇಕೆಂದರೆ, ನಾನು ಆ ಚಿತ್ರಗಳನ್ನು ಒಂಟಿಯಾಗಿ ನೋಡಲು ಬಯಸುತ್ತಿದ್ದೆ. ಆ ಲೇಖನವನ್ನು ಮತ್ತೊಮ್ಮೆ ಒಂಟಿಯಾಗಿದ್ದಾಗ ಓದಲು ಮತ್ತು ಅರ್ಥ ಮಾಡಿಕೊಳ್ಳಲು ಬಯಸುತ್ತಿದ್ದೆ.

ಆ ಪುಸ್ತಕ ನನ್ನ ಬಳಿ ಮೂರು ದಿನಗಳಿತ್ತು. ಅಮ್ಮನಿಗೆ ಈ ಪುಸ್ತಕದ ಬಗ್ಗೆ ತಿಳಿದರೆ, ಅವರು ಇದನ್ನು ನೋಡಿದರೆ ಎಂಬ ಭಯದಲ್ಲಿ ಮೂರು ದಿನಗಳನ್ನು ಕಳೆದೆ. ಮೂರನೆಯ ದಿನ